ಹೆರಿಗೆ ಭತ್ಯ ಕಾರ್ಯಕ್ರಮಂ

೬೩. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹೆರಿಗೆ ಭತ್ಯೆ ನೀಡುವ ಕಾರ್ಯಕ್ರಮವನ್ನು ಯಾವಾಗ ಜಾರಿಗೆ ತರಲಾಯಿತು. ಇದರ ಪ್ರಯೋಜನ ಪಡೆಯಲು ಅರ್ಹತೆಗಳೇನು ? ಹಾಗೂ ಇದುವರೆವಿಗೂ ಎಷ್ಟು ಮಂದಿಗೆ ಇದರ ಪ್ರಯೋಜನ ದೊರೆತಿದೆ ?

ಆ) ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು ?

ಇ) ರಾಜ್ಯದ ಆಸ್ಪತ್ರೆಗಳಲ್ಲಿ ಹೆರಿಗೆ ಭತ್ಯೆ ಹಣ ಮಂಜೂರು ಮಾಡದೇ ಹಾಗೂ ಹೆರಿಗೆ ಭತ್ಯೆ ಅರ್ಜಿಗಳನ್ನು ವಿಲೇ ಆಗದೆ ಉಳಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಎಷ್ಟು ಅರ್ಜಿಗಳು ಬಾಕಿ ಇದೆ ಹಾಗೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ ?

ಉ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೦೧-೦೪-೧೯೮೪ ರಿಂದ ಈ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂತು. ಇದರ ಪ್ರಯೋಜನ ಪಡೆಯುವ ಮಹಿಳೆಯು ಭೂ ರಹಿತ ಕೃಷಿ ಕಾರ್ಮಿಕರಾಗಿದ್ದು ಅವಳ ಅಥವಾ ಆಕೆಯ ಗಂಡ ಯಾವ ಜಮೀನನ್ನು ಕರ್ನಾಟಕದಲ್ಲಿ ಹೊಂದಿರಕೂಡದು ಹಾಗೂ ಕೃಷಿ ಕೆಲಸದಲ್ಲಿ ದಿನಗೂಲಿ ಅಥವಾ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವಳಾಗಿರಬೇಕು.

ದಿನಾಂಕ ೦೧-೦೪-೧೯೮೪ರಿಂದ ೩೧-೧೦-೧೯೮೭ರವರೆಗೆ ೨,೯೯,೭೬೬ ಮಹಿಳೆಯರು ಈ ಲಾಭ ಪಡೆದಿದ್ದಾರೆ.

ಆ) ದಿನಾಂಕ ೧-೪-೧೯೮೪ ರಿಂದ ೩೧-೧೦-೧೯೮೭ರ ವರೆಗೆ ರೂ. ೮,೯೯,೩೯,೮೦೦-೦೦ ಖರ್ಚಾಗಿದೆ.

ಇ) ಅರ್ಜಿಗಳು ವಿಲೇವಾರಿ ಆಗದೆ ಉಳಿದಿರುವುದರ ಬಗ್ಗೆ ವರದಿಗಳು ಬಂದಿದೆ.

ಈ) ಹಾಸನ ಬಿಜಾಪುರ, ಬೆಳಗಾವಿ, ಚಿಕ್ಕಮಗಳೂರು, ಬೆಂಗಳೂರು (ಗ್ರಾ) ಜಿಲ್ಲೆಗಳನ್ನುಳಿದು ಉಳಿದ ೧೫ ಜಿಲ್ಲೆಗಳ ಮಾಹಿತಿ ಶೇಖರಿಸಿದ್ದು ಅದರಂತೆ ದಿನಾಂಕ ೧-೧೨-೧೯೮೭ರಲ್ಲಿ ೫೨,೪೪೧ ಅರ್ಜಿಗಳು ಬಾಕಿ ಉಳಿದಿದೆ. ರೂ. ೧,೫೭,೩೨,೩೦೦-೦೦ ಬಿಡುಗಡೆ ಮಾಡಬೇಕಾಗಿದೆ.

ಉ) ಹೆರಿಗೆ ಭತ್ಯೆ ಯೋಜನೆಗಾಗಿ ೧೯೮೭-೮೮ನೇ ಸಾಲಿಗೆ ೪ ಕೋಟಿ ಆಯವ ಯ ಒದಗಿಸಿದು ದಿನಾಂಕ ೩೦-೧೧-೧೯೮೭ರ ವರೆಗೆ ೧,೮೦,೯೨,೬೦-೦೦, ೩೩೪೭ ಫಲಾನುಭವಿಗಳಿಗೆ ಖರ್ಚು ಮಾಡಿದ್ದು ಉಳಿದ ಅರ್ಜಿಗಳಿಗೆ ರೂ. ೧,೫೭,೩೨,೩೦೦-೦೦ ಬಿಡುಗಡೆ ಮಾಡಬೇಕಾಗಿರುತ್ತದೆ.

ಮಂತ್ರಾಲಯದಲ್ಲಿರುವ ಸರಕಾರಿ ಛತ್ರಗಳು

೩೪೭. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂತ್ರಾಲಯದಲ್ಲಿ ಸರ್ಕಾರದವರು ನಿರ್ಮಿಸಿರುವ ಛತ್ರಕ್ಕೆ ತಗಲಿರುವ ವೆಚ್ಚವೆಷ್ಟು ?

ಆ) ಸದರಿ ಛತ್ರದ ಕಟ್ಟಡ ನಾಡುರಸ್ತೆಯಲ್ಲಿದ್ದು ಕುಡಿಯುವ ನೀರಿನ ಅಭಾವ ಹಾಗೂ ವಿದ್ಯುತ್ ಬಿಲ್ ಪಾವತಿ ಮಾಡದೇ ಇರುವುದರಿಂದ ಅಲ್ಲಿ ತಂಗುವವರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸದರಿ ಛತ್ರದ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಕಂಡು ಬಂದಿರುವ ಲೋಪದೋಷಗಳ ಬಗ್ಗೆ ಸರ್ಕಾರವು ತನಿಖೆ ಮಾಡಿಸಿದೆಯೇ, ಹಾಗೂ ಛತ್ರವನ್ನು ವ್ಯವಸ್ಥಿತಗೊಳಿಸಲು ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ರಾಜ್ಯಮಂತ್ರಿಗಳು).—

ಅ) ೨೮.೯೦ ಲಕ್ಷ ರೂ.ಗಳು.

ಆ) ಬಂದಿದೆ.

ಇ) ಲೋಪದೋಷಗಳನ್ನು ಗಮನಿಸಿ ಕ್ರಮ ಕೈಕೊಳ್ಳಲಾಗುತ್ತಿದೆ.

ತಾಲ್ಲೂಕು ಪುನರ್‌ವಿಂಗಡಣೆ ಸಮಿತಿ.

೬೨. ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಹಾಗೂ ತಾಲ್ಲೂಕು ಪುನರ್ವಿಂಗಡಣಾ ಸಮಿತಿಯಿಂ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ ?

ಆ) ಆ ಸಮಿತಿಯು ವರದಿಯಲ್ಲಿ ಬಾಗಲಕೋಟೆ ಜಿಲ್ಲೆಯಾಗಲು ಮಂತರ್ಹ ಗುಳೇದಗುಡ್ಡ ತಾಲ್ಲೂಕು ಆಗಲು ಶಿಫಾರಸು ಮಾಡಿದೆಯೇ ?

ಇ) ಈ ವರದಿಯನ್ನು ಸರ್ಕಾರದವರಂ ಎಂದು ಜಾರಿಗೆ ತರುವರು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ ಹಾಗೂ ಅಂತಿಮ ತೀರ್ಮಾನವನ್ನು ಮುಂದೆ ಕೈಗೊಳ್ಳಲಾಗುತ್ತದೆ.

Residential Schools for Scheduled Castes and Scheduled Tribes.

474. SRI B. BASAVALINGEPPA (Yelahanka) Will the Minister for Social Welfare be pleased to state.—

a) the number of residential schools for Scheduled Castes and Scheduled Tribes proposed to be started during 1987-88 ?

b) the number of schools started during the year 1987-88 (details be furnished),

c) the amount allotted and spent for this purpose ?

SRI G. BASAVANNAPPA (Minister for Social Welfare).—

a) 25 Residential Schools have already been started during the current year.

b) 25. List is enclosed.

c) A sum of Rs. 15.00 lakhs has been allotted to districts and a sum of Rs. 7,84,339 has been spent upto December 1987.